**ಪಿ.ಡಬ್ಲೂ. 1**

ಇಂದು ದಿಃ **06.12.2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 4 ನೇ ಆರೋಪಿ ಪರ ವಕೀಲರಿಂದ**

7. ಡಿ ವಾಯ ಎಸ್ ಪಿ ರವರಿಗೆ ನಾನು ಸದರಿ ಈ ಪ್ರಕರಣದ ಕರೆಯ ವಿಚಾರ ತಿಳಿಸಿದ ನಂತರ ಅವರು ಅದೇ ದಿನ ಸಾಯಂಕಾಲ ನನ್ನನ್ನು ಕರೆಸಿದ್ದರು. ಸದರಿ ನಾನು ತಿಳಿಸಿದ ವಿಷಯವನ್ನು ಸದರಿಯವರು ಎಸ್ ಪಿ ರವರಿಗೆ ತಿಳಿಸಿರುತ್ತಾರೆ ಎಂದು ನನಗೆ ಹೇಳಿದರು. ಸದರಿ ಎಸ್ ಪಿ ರವರು ಹಾಗೂ ಡಿ ವಾಯ ಎಸ್ ಪಿ ರವರು ನನ್ನನ್ನು ಕರೆಸಿ ಸದರಿ ಕರೆಯ ಬಗ್ಗೆ ದೂರು ದಾಖಲಿಸುವಂತೆ ಸೂಚಿಸಿದ ಮೇರೆಗೆ ನಾನು ದೂರು ದಾಖಲಿಸಿರುತ್ತೇನೆ ಎಂದರೆ ಸರಿ. ನಾನು ಈ ಪ್ರಕರಣದ ದೂರು ದಾಖಲಿಸುವ ಮುನ್ನ 1 ನೇ ಆರೋಪಿಯನ್ನು ಧಾರವಾಡದ ದುರ್ಗಾ ದೇವಿಯ ದೇವಸ್ಥಾನದಲ್ಲಿ ನೋಡಿರುತ್ತೇನೆ. ನಾನು ಪೋಲಿಸರಿಗೆ ಸದರಿ 1 ನೇ ಆರೋಪಿಯೇ ನನಗೆ ಕರೆ ಮಾಡಿದ್ದರು ಎಂದು ನಾನು ಮಾಹಿತಿ ನೀಡಿಲ್ಲ. 4 ನೇ ಆರೋಪಿಯನ್ನು ನಾನು ದೂರು ನೀಡುವ ಮೊದಲು ಯಾವತ್ತೂ ನೋಡಿರಲಿಲ್ಲ. ದಿಃ 22.05.2018 ರಂದು ಪೋಲಿಸರು ನನ್ನನ್ನು ಠಾಣೆಗೆ ಕರೆಸಿ 1 ಮತ್ತು 4 ನೇ ಆರೋಪಿತರನ್ನು ತೋರಿಸಿ ಅವರ ಹೆಸರನ್ನು ಹೇಳಿದಾಗ ನನಗೆ ಅವರ ಹೆಸರು ಗೊತ್ತಾಗಿರುತ್ತದೆ ಎಂದರೆ ಸರಿ.

8. ನಾನು ದೂರನ್ನು ಬೆರಳಚ್ಚು ಮಾಡಿ ನೀಡಿರುತ್ತೇನೆ. ದೂರು ನೀಡಲು ನಾನೊಬ್ಬನೇ ಹೋಗಿದ್ದೆ. ದೂರನ್ನು ಬೆರಳಚ್ಚು ಮಾಡಲು ಮಾಹಿತಿಯನ್ನು ನಾನೇ ನೀಡಿದ್ದೆ. ನನಗೆ ಕರೆ ಬಂದಿದ್ದ ಮೊಬೈಲ್ ನಿಂದ ಚಾಸಾ6 ರಿಂದ 8 ರವರಿಗೂ ಸಹ ಆ ರೀತಿ ಕರೆ ಅದೇ ನಂಬರನಿಂದ ಬಂದಿತ್ತು ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು ಅದನ್ನು ನಾನು ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಸದರಿ ಕರೆಯ ಬಗ್ಗೆ ಪರಿಕ್ಷಾರ್ಥಿ ಗಳಲ್ಲಿ ವಿಚಾರಿಸಿದಾಗ ಕೃಪೆಂದ್ರ ಮೂರ್ತಿ ತಂದೇ ನರಸಿಂಹಯ್ಯ ರವರು ಹಾಗೂ ಸುರೇಶ ಬಡಕಪ್ಪನವರ್ ರವರು ಅವರಿಗೂ ಸಹ ಸೋಮಶೇಖರ ರವರು ಪೊನ ಮಾಡಿ ಪರೀಕ್ಷಾರ್ಥಿಗಳಿಂದ ತಲಾ ರೂ.2,000/- ಹಣ ಸಂಗ್ರಹಿಸಿ ತಮ್ಮ ಹತ್ತಿರ ಕೊಡಲು ತಿಳಿಸಿರುತ್ತಾನೆ ಎಂದು ನಾನು ಹೇಳಿ ದೂರಿನಲ್ಲಿ ಬರೇಸಿರುತ್ತೇನೆ ಎಂದರೆ ಸರಿ. ಅದೇ ರೀತಿ ಗೋಪಾಲ್ ರವರಿಗೂ ಸಹ ಸೋಮಶೇಖರ ರವರೇ ಪೊನ ಮಾಡಿದ್ದು ಆತ ತರಬೇತಿಯಲ್ಲಿ ಇದುದ್ದರಿಂದ ಪೊನ ತೆಗೆದಿರುವುದಿಲ್ಲ ಎಂದು ನಾನು ದೂರಿನಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ಚಾಸಾ6 ರಿಂದ 8 ರವರು ಅವರಿಗೂ ಸಹ ನನಗೆ ಬಂದ ಪೊನ ನಂಬರನಿಂದಲೇ ಕರೆ

ಬಂದಿದ್ದಾಗಿ ನನ್ನೊಟ್ಟಿಗೆ ಯಾವತ್ತೂ ಅವರು ಚರ್ಚಿಸಿಲ್ಲ. ಸದರಿ ಚಾಸಾ6 ರಿಂದ 8 ರವರು ಅವರಿಗೆ ಕರೆ ಬಂದಿದ್ದ ಬಗ್ಗೆ ದೂರನ್ನು ಸದರಿಯವರು ನೀಡಿಲ್ಲ.

9. ನನ್ನ ಖಾಯಂ ವಿಳಾಸ ಕುಮಾರೇಶ್ವರ ನಗರ , ಮೆಹಬೂಬನಗರ ಲಾಸ್ಟ ಸ್ಟಾಪ್ . ಪೋಲಿಸರು ಪಂಚನಾಮೆಗೆ ಬಂದು ಸ್ಥಳ ವನ್ನು ತೋರಿಸುವಂತೆ ನನಗೆ ಲಿಖಿತವಾಗಿ ನೊಟಿಸ್ ನೀಡಿರಲಿಲ್ಲ. ಪೋಲಿಸರು ಬೇರೆ ಯಾರನ್ನು ಸಹ ಸದರಿ ಪಂಚನಾಮೆಗೆ ನೊಟಿಸ ನೀಡುವ ಮೂಲಕ ಕರೆಸಿರಲಿಲ್ಲ. ಸದರಿ ಘಟನಾ ಸ್ಥಳದಲ್ಲಿ ಪೋಲಿಸರು ನನ್ನ ಸಮಕ್ಷಮ ದಾಖಲೆಯನ್ನು ಬರೆದುಕೊಂಡರು. ಸದರಿ ದಾಖಲೆಗೆ ನಾನು ಹಾಗೂ ಎರಡು ಜನ ಪಂಚರು ಸಹಿ ಮಾಡಿದೆವು. ಸದರಿ ದಾಖಲೆಗೆ ನಮ್ಮ ಸಮಕ್ಷಮ ರೈಟರ್ ಹಾಗೂ ಐಓ ಸಹಿ ಮಾಡಲಿಲ್ಲ ಎಂದರೆ ಸರಿ. ಚಾಸಾ2 ಮತ್ತು 3 ರವರನ್ನು ಚಾಸಾ18 ರವರು ಕರೆಸಿದ್ದರು. ಈಗ ಸಾಕ್ಷಿಗೆ ನಿಪಿ.2 ಪಂಚನಾಮೆಯನ್ನು ತೋರಿಸಿ ಸದರಿ ಘಟನಾ ಸ್ಥಳದಲ್ಲಿ ಸಾಕ್ಷಿ ಹಾಗೂ ಎರಡು ಜನ ಪಂಚರು ಸಹಿ ಮಾಡಿದ ದಾಖಲೆ ನಿಪಿ.2 ಅಲ್ಲ ಎಂದು ಸೂಚಿಸಲಾಗಿ ಸಾಕ್ಷಿ ಹೌದು ಎನ್ನುತ್ತಾರೆ. ನಿಪಿ.3 ನಕಾಶೆಯನ್ನು ಘಟನಾ ಸ್ಥಳದಲ್ಲಿ ತಯಾರಿಸಲಾಗಿದೆ ಅದಕ್ಕೆ ನಾನು ಹಾಗೂ ಪಂಚರು ಮತ್ತು ರೈಟರ್ ಸಹಿ ಮಾಡಿರುತ್ತೇವೆ.

10. ದಿಃ 18.05.2018 ರಂದು ಮದ್ಯಾಹ್ನ 12.30 ರ ಸಮಯದಲ್ಲಿ ನಾನು ನರೇಂದ್ರ ಬೈಪಾಸ ಮೇಲೆ ಇದ್ದಾಗ ಮೊಬೈಲ್ ನಂ.9538291722 ರಿಂದ ನನ್ನ ಮೊಬೈಲ್ ನಂ.9964329220 ಗೆ ಕರೆ ಮಾಡಿ ಸದರಿ ಕರೆ ಮಾಡಿದವರು ತಾನು ಧಾರವಾಡದ ಎಸ್ ಪಿ ಸಂಗೀತಾ ರವರು ಮಾತನಾಡುತ್ತಿದ್ದಾಗಿ ಹೇಳಿದ್ದರು ಎಂದು ಸುಳ್ಳು ಸಾಕ್ಷಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಹಾಗೂ ಸದರಿ ಕರೆಯಲ್ಲಿ ಅವರು ಅವರಿಗೆ ಗೊತ್ತಿರುವವರೊಬ್ಬರು ಜರ್ಮನ್ ಆಸ್ಪತ್ರೆ ಯಲ್ಲಿ ಚಿಕಿತ್ಸೆಗಾಗಿ ದಾಖಲಾಗಿದ್ದು ಅವರ ಚಿಕಿತ್ಸಾ ವೆಚ್ಚಕ್ಕೆ ಸಹಾಯವಾಗಲು ಪರೀಕ್ಷಾರ್ಥಿಗಳಿಂದ ತಲಾ ರೂ.2,000/- ಸಂಗ್ರಹಿಸಿ ನೀಡಬೇಕೆಂದು ಹಾಗೂ ನೀಡಲಿಲ್ಲ ಎಂದರೆ ನನಗೆ ತೊಂದರೆ ಆಗುತ್ತದೆ ಎಂದು ಸದರಿ ಕರೆಯಲ್ಲಿ ನನ್ನನ್ನು ಹೆದರಿಸಿದ್ದರು ಎಂದು ಸುಳ್ಳು ಸಾಕ್ಷಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ6 ರಿಂದ 8 ರವರಿಗೂ ಸಹ ನನಗೆ ಬಂದ ಮೊಬೈಲ್ ನಂಬರನಿಂದಲೇ ಕರೆ ಬಂದಿತ್ತು ಎಂದು ಸುಳ್ಳು ಸಾಕ್ಷಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಹಾಗೂ ಚಾಸಾ7 ರವರಿಗೆ ಬಂದ ಕರೆಯನ್ನು ಅವರು ಸ್ವಿಕರಿಸಲಿಲ್ಲ ಎಂದು ಸಹ ಸುಳ್ಳು ಸಾಕ್ಷಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಹಾಗೂ ದಿಃ 19.05.2018 ರಂದು ಪೋಲಿಸರು ನನ್ನ ಸಮಕ್ಷಮ ಬೆಳಿಗ್ಗೆ 9.00 ರಿಂದ 10.00 ವೆರಗೆ ನಿಪಿ.2 ರಂತೆ ಪಂಚನಾಮೆ ಜರುಗಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಮೊಬೈಲ್ ನಂ.9538291722 ಯಿಂದ ಯಾವುದೇ ಕರೆ ಬಂದಿಲ್ಲ

**ಪಿ.ಡಬ್ಲ್ಯೂ. 1**

ಎಂದರೆ ಸರಿಯಲ್ಲ. ಸದರಿ ಪೋಲಿಸರು ನನ್ನ ಮೇಲಾಧಿಕಾರಿಗಳು ಆದ್ದರಿಂದ ಅವರರಿಗೆ ಅನುಕೂಲವಾಗಲಿ ಎಂದು ಸುಳ್ಳು ದೂರನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

(1 ಮತ್ತು 2 ನೇ ಆರೋಪಿ ಪರ ವಕೀಲರು ಹಾಜರಿದ್ದು 4 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅವಳಡಿಸಿಕೊಳ್ಳಲು ಕೋರಿಕೊಂಡ ಮೇರೆಗೆ ಅನುಮತಿಸಲಾಯಿತು. )

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾ..ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಅದೆ,

**( ಅಮೋಲ್ ಜಯಕುಮಾರ ಹಿರಿಕುಡೆ.)**
**4** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ.